ಬಂದು ಬಿಡಿ ಎಂದು ಹೇಳಿದನಲ್ಲದೆ ಅದಕ್ಕೆ ಬೇಕಾದ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದ. ನಿಮ್ಮ ಜತೆಗೆ ಮೂರ್ನಾಲ್ಕು ಜನ ಅಡಿಗೆಯವರನ್ನು ಕರೆದುಕೊಂಡು ಹೋಗಿ. ಅಡಿಗೆಗೆ ಬೇಕಾದ ಪಾತ್ರೆ, ದಿನಸಿಗಳನ್ನು ಇಲ್ಲಿಂದಲೇ ತಗೊಂಡು ಹೋಗಿ. ದಾರಿಯಲ್ಲಿ ಹೋಟೆಲುಗಳಲ್ಲಿ ಏನೂ ತಿನ್ನಬೇಡಿ ಎಂದು ಕಟ್ಟುನಿಟ್ಟಾಗಿ ಹೇಳಿದ.

ಮಾರನೇ ದಿನವೇ ಕೇಶವ ರೆಡ್ಡಿ ಐದಾರು ಜನ ಕಾಟನ್ ಮಿಲ್ ನೌಕರರ ಸಂಘದ ಪದಾಧಿಕಾರಿಗಳನ್ನು ಕರೆದುಕೊಂಡು ಎಸ್‌ಪಿ ಸಾಹೇಬರನ್ನು ಭೇಟಿ ಮಾಡಿದ. ನಮ್ಮ ಸಂಘದ ಸದಸ್ಯ ಕಾರ್ಮಿಕರು ಪ್ರತಿ ವರ್ಷ ತಿರುಪತಿಗೆ ಯಾತ್ರೆ ಹೋಗುತ್ತಾರೆ. ಈ ಸಲದ್ದು 25ನೇ ವರ್ಷದ ಯಾತ್ರೆ. ಯಾತ್ರೆಯನ್ನು ನೀವೇ ಉದ್ಘಾಟಿಸಬೇಕು ಎಂದು ಕೇಳಿಕೊಂಡ. ಜಿಲ್ಲಾ ಪೊಲೀಸ್ ಕಲ್ಯಾಣ ನಿಧಿಗೆ ನಮ್ಮ ಸಂಘದ ಸಹಾಯ ಎಂದು ಇಪ್ಪತ್ತೈದು ಸಾವಿರ ರೂ ದೇಣಿಗೆಯ ಚೆಕ್ ಕೊಟ್ಟು ಮತ್ತೆ ವಿನಂತಿಸಿಕೊಂಡ.

ಕೇಶವರೆಡ್ಡಿಗೆ ಸಿಟಿಯಲ್ಲಿರೋ ಮೂವತ್ತಕ್ಕೂ ಹೆಚ್ಚು ಕಾಟನ್ ಮಿಲ್‌ಗಳ ಕಾರ್ಮಿಕರ ಸಂಘಗಳ ಒಕ್ಕೂಟದ ಅಧ್ಯಕ್ಷ. ಜತೆಗೆ ಹತ್ತಾರು ವ್ಯವಹಾರ ಮಾಡಿ ಶ್ರೀಮಂತನಾಗಿದ್ದ. ಸಿಟಿಯಲ್ಲಿ ಕಾರ್ಮಿಕರ ಏನೇ ಸಮಸ್ಯೆ, ಜಗಳಗಳಾದರೂ ಬಗೆಹರಿಸಲು ಪೊಲೀಸರು ಅವನ ನೆರವು ಬಯಸುತ್ತಿದ್ದರು. ಹೀಗಾಗಿ ಅವನಿಗೆ ಪೊಲೀಸ್ ವಲಯದಲ್ಲಿ ಒಳ್ಳೆಯ ಹೆಸರಿದೆ. ಈಗ ಅವನು ಕರೆಯುತ್ತಿರುವುದು ತಿರುಪತಿ ಯಾತ್ರೆಯ ಬೆಳ್ಳಿ ಹಬ್ಬದ ಉದ್ಘಾಟನೆಗೆ. ಅದು ದೇವರ ಕೆಲಸ ಅಂತ ಎಸ್‌ಪಿ ಸಾಹೇಬರಿಗೆ ಅನ್ನಿಸಿತು. ಯಾತ್ರೆ ಹೊರಡುವುದು ಯಾವಾಗ ಇತ್ಯಾದಿ ವಿವರಗಳನ್ನು ಕೇಳಿದ ಮೇಲೆ ಉದ್ಘಾಟನೆ ಎಲ್ಲಿ ಮಾಡುತ್ತೀರಿ ಎಂದು ಕೇಳಿದರು. ಯಾತ್ರೆ ಶುರುವಾಗುವುದು ರಾತ್ರಿ ಹನ್ನೆರಡು ಗಂಟೆಗೆ. ನಿಮ್ಮ ಬಂಗ್ಲೆ ಮುಂಭಾಗದಲ್ಲಿ ಒಂದು ಬಸ್ ತಂದು ನಿಲ್ಲಿಸ್ತೀವಿ. ಅಲ್ಲೇ ಪೂಜೆ ಮಾಡುತ್ತೇವೆ. ಬಸ್ಸಿಗೆ ನೀವು ಈಡುಗಾಯಿ ಒಡೆದರೆ ಸಾಕು ಎಂದು ಕೇಶವರೆಡ್ಡಿ ವಿವರಿಸಿದ. ಅರ್ಧ ಗಂಟೆಯೊಳಗೆ ಎಲ್ಲಾ ಮುಗಿಯಬೇಕು ಅನ್ನುವ ಷರತ್ತಿನೊಂದಿಗೆ ಸಾಹೇಬರು ಯಾತ್ರೆ ಉದ್ಘಾಟನೆ ಮಾಡಲು ಒಪ್ಪಿದರು.

## ಭಾಗ-4

ತಿರುಪತಿ ಯಾತ್ರಿಗಳ ಜತೆಯಲ್ಲೇ ಅಯ್ಯ ಅವರನ್ನೂ ಕಳಿಸುವುದು ಸಲೀಸು ಅನ್ನಿಸಿತು ಕೇಶವರೆಡ್ಡಿಗೆ. ಒಂದು ಬಸ್ಸಿನಲ್ಲಿ ಮುತ್ಯಾಲನ ಮನೆಯಲ್ಲಿರುವ ಪೆಟ್ಟಿಗೆಗಳನ್ನೂ ಯಾತ್ರಿಕರ ಲಗೇಜು, ದಿನಸಿ ಸಾಮಗ್ರಿ, ಪಾತ್ರೆ ಪಡಗಗಳ ನಡುವೆ ಇಟ್ಟು ಸಾಗಿಸಬಹುದಲ್ಲ ಅಂತಲೂ ಯೋಚಿಸಿದ. ನಮ್ಮ ಗಡಿಯ ಚೆಕ್‌ಪೋಸ್ಟ್‌ನಲ್ಲಿ ಅವತ್ತು ಡ್ಯೂಟಿ ಮೇಲೆ ಇರೋರನ್ನು ಸರಿ ಮಾಡಿಕೊಳ್ಳಬಹುದು. ಗಡಿ ದಾಟಿದ ಮೇಲೆ ಬಸ್‌ಗಳನ್ನು ನಿಲ್ಲಿಸಿ ಚೆಕ್ ಮಾಡಿದರೆ? ಪೆಟ್ಟಿಗೆಗಳಲ್ಲಿ ಏನಿದೆ ಅಂತ ಒಡೆದು ನೋಡಿದರೆ? ಪೆಟ್ಟಿಗೆಗಳ ಜತೆಗೆ ಅಯ್ಯಗಾರು ಸಹ ಪೊಲೀಸರಿಗೆ ಸಿಕ್ಕಿಬೀಳ್ತಾರೆ ಅಂತ ಅನ್ನಿಸಿತು. ಮೊದಲು ಅಯ್ಯಗಾರು ಹೋಗಲಿ. ಆಮೇಲೆ ಪೆಟ್ಟಿಗೆಗಳ ಬಗ್ಗೆ ಯೋಚನೆ ಮಾಡೋಣ ಅನ್ನಿಸಿ ಸುಮ್ಮನಾದ.

ಕಡಪಾಕ್ಕೆ ಹೋಗಿ ಪೆದ್ದಾಯನನ ಜತೆ ಮಾತಾಡಿ ಪ್ಲಾನು ಮಾಡಬೇಕು ಅಂತ ತೀರ್ಮಾನಿಸಿದ. ಮರುದಿನ ಸಂಜೆ ಹೊತ್ತಿಗೆ ಕಡಪಾಕ್ಕೆ ಹೋದ. ಆದರೆ ಪೆದ್ದಾಯನ ಮನೆಯಲ್ಲಿ ಇರಲಿಲ್ಲ. ಕತ್ತಲು ಇಳಿದ ಮೇಲೆ ಅವನು ಮನೆಗೆ ಬಂದ.

ರೆಡ್ಡಿ ಮುಖ ನೋಡುತ್ತಲೇ ಪೆದ್ದಾಯನ, ಅಯ್ಯಗಾರು ಹೇಗಿದ್ದಾರೆ ಅನ್ನೋದನ್ನೂ ವಿಚಾರಿಸದೆ, ನಮ್ಮ ಪೊಲೀಸರಿಗೆ ಅನುಮಾನ ಬಂದಿದೆ. ಅಯ್ಯಗಾರು ನಿಮ್ಮ ಊರಲ್ಲಿದ್ದಾರೆ ಅನ್ನೋದು ಪೊಲೀಸರಿಗೆ ಗೊತ್ತಾಗಿದೆ. ಇಲ್ಲಿಂದ ಕೆಲವರು ಅವರನ್ನು ಅರೆಸ್ಟ್ ಮಾಡೋಕೆ ಅಂತ ಮಫ್ತಿಯಲ್ಲಿ